





# ಪ್ರಾಣಿಗಳನ್ನು ಹೋಲುವ ಕಾರುಗಳು!

ಬರಲಿವೆ. ಕಪ್ಪೆ, ಏಡಿ, ತಿಮಿಂಗಲ ಕಾರುಗಳು!– ಇನ್ನೀಗ ಜಾಹೀರಾತು ಹೀಗಿರಲಿವೆ!

ವಾಹನ ವಿನ್ಯಾಸಕರದ್ದೇ ಒಂದು ಪ್ರತ್ಯೇಕ ಲೋಕ. ಕಂಪನಿಗೆ ಲಾಭ ಮಾಡಿಕೊಡುವ ಮತ್ತು ಗ್ರಾಹಕರಿಗೆ ಖುಷಿ ಕೊಡಿಸುವ– ಎರಡೂ ದೃಷ್ಟಿಯಿಂದ ತಲೆ ಕೆಡಿಸಿಕೊಂಡು ವಿನೂತನ ವಿನ್ಯಾಸಗಳನ್ನು ಇವರು ಸೃಷ್ಟಿಸುತ್ತಾರೆ.

ಇಲ್ಲಿದೆ ನೋಡಿ ಒಂದು ಉದಾಹರಣೆ– ಪ್ರಮುಖ ಕಾರು ಕಂಪನಿಗಳಲ್ಲೊಂದಾದ ಜನರಲ್ ಮೋಟಾರ್ಸ್‌ನ ವಿನ್ಯಾಸಕ ಹ್ಯಾರ್ಲೆ ಎರ್ಲ್ ಇದೀಗ ಕಪ್ಪೆ, ಏಡಿ, ತಿಮಿಂಗಲ, ಚೇಳು ಹೀಗೆ ವಿವಿಧ ನಮೂನೆಯ ಕಾರುಗಳನ್ನು ಸಿದ್ದಪಡಿಸಿದ್ದಾನೆ.

ದೊಡ್ಡ ಮನೆಯಿದ್ದರೆ, ಮನೆಯೊಳಗೇ ಕಾರಲ್ಲಿ ಹೋಗಿ ಇಳಿಯುವ ಐಲು ನಿಮಗಿದ್ದರೆ, ಅದಕ್ಕೂ ವಿನ್ಯಾಸಕರು ರೆಡಿ– ಅದಕ್ಕೆಂದೇ ಅತ್ಯಂತ ಸಣ್ಣ ಕಾರುಗಳನ್ನೂ ವಿನ್ಯಾಸ ಮಾಡಿದ್ದಾರೆ.

ಗ್ರಾಹಕರು ಇಷ್ಟಪಟ್ಟರೆ, ಬೇಡಿಕೆ ಹೆಚ್ಚಾದರೆ ಗ್ರಾಹಕರ ಕೈಗೆಟಕುವ ಬೆಲೆಯಲ್ಲಿ ಈ ಹೊಸ ಮಾದರಿಯ ಕಾರುಗಳನ್ನು ಸಿದ್ದಪಡಿಸುವ ವಿಶ್ವಾಸವನ್ನು ಕಂಪನಿ ಹೊಂದಿದೆ. 'ಶೀಘ್ರವೇ ಈ ಮಾದರಿಯ ಕಾರಿಗೂ ಮಾರುಕಟ್ಟೆ ಕುದುರಲಿದೆ' ಎನ್ನುವುದು ಕಂಪೆನಿಯ ವಕ್ತಾರರ ವಿಶ್ವಾಸ.

■ ವಸಂತ್ ಮಾಲವಿ





